ಅಧ್ಯಕ್ಷರು: ತಾವು ಯಾರಾದರೂ ಉತ್ತರ ಹೇಳುತ್ತೀರಾ. ನಾನು ಮುಗಿಸುತ್ತಿದ್ದೇನೆ. ಬೇಡಿಕೆಯ ಮೇಲೆ ಯಾರಾದರು ಮಾತನಾಡುತ್ತೀರ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾವು ನಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶ ಕೊಡದಿರುವುದನ್ನು ವಿರೋಧಿಸಿ, ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ನಾವು ಬಾವಿಯಲ್ಲಿ ಧರಣಿ ಹೂಡುತ್ತೇವೆ.

(ಜನತಾದಳ(ಎಸ್)ನ ಸದಸ್ಯರು ಬಾವಿಯಲ್ಲಿ ಕುಳಿತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಬೇಡಿಕೆಯ ಮೇಲೆ ಮಾತನಾಡುವವರು ಯಾರು ಇಲ್ಲ, ಆದ್ದರಿಂದ ಮಾನ್ಯ ಫೋರ್ಪಡೆಯವರು ತಾವು ಉತ್ತರವನ್ನು ಹೇಳಿ. ಅನಂತರ ಮತದಾನಕ್ಕೆ ಹಾಕೋಣ.

ಅಧ್ಯಕ್ಷರು: ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಇನ್ಯಾರೂ ಮಾತನಾಡುವವರು ಇದ್ದಂತೆ ಕಾಣುವುದಿಲ್ಲ. ಆದ್ದರಿಂದ ಮಾನ್ಯ ಫೋರ್ಪಡೆಯವರೇ, ತಾವು ಈಗ ಉತ್ತರ ಹೇಳಿಬಿಡಿ. ಅನಂತರ ನಾನು ಅನುದಾನ ಬೇಡಿಕೆಗಳನ್ನು ವೋಟಿಂಗ್‌ಗೆ ಹಾಕುತ್ತೇನೆ.

(ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:ಮಾನ್ಯ ಅಧ್ಯಕ್ಷರೇ, ಈಗ ಅವರ ಬೇಡಿಕೆ ಏನಿದೆ, ಅದನ್ನು ನಾಳೆ ಮೂವ್ ಮಾಡಲಿ. ಮಾತನಾಡುವವರು ಇನ್ನೂ ಇರಬಹುದು, ಅಂತಹವರಿಗೆ ಮಾತನಾಡಲು ಅವಕಾಶ ಕೊಡೋಣ. ಎಲ್ಲರೂ ಮಾತನಾಡಿದ ಮೇಲೆ ಬೇಡಿಕೆಗಳನ್ನು ಮತಕ್ಕೆ ಹಾಕೋಣ. ಈಗ ತಾನೇ ಮೀಸಲಾತಿ ಸಂಬಂಧಿಸಿದ ಚರ್ಚೆ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಬೇಕಾದರೆ ಅವರು ನಾಳೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಹಾಗಾದರೆ ಈಗ ನಾನು ಸಭೆಯನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10 ಗಂಟೆಗೆ ಪುನಃ ಸಮಾವೇಶಗೊಳ್ಳಲಿದೆ.

(ಸದನವು ಸಂಜೆ 5.02 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 28ನೇ ಏಪ್ರಿಲ್ 2000ದಂದು ಬೆಳಿಗ್ಗೆ 10 ಘಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)